ಲೀಲಾ ಹಾಗೆಯೇ ಮಾಡಿದಳು. ಆದರೂ ಅವಳ ಮನಸ್ಸಿಗೆ ಸಮಾಧಾನವಿಲ್ಲ. ಹಣವಿದ್ದರೂ ಬಡತನದಲ್ಲಿ ಇರುವಂಥ ಭಾವನೆ ಅವಳ ಮನಸ್ಸಿನಲ್ಲಿ ಮನೆ ಮಾಡಿತ್ತು. ಕಡೆಗೆ ದೇವಿ ಸರಸ್ವತಿಯ ಆವಾಹನೆ ಮಾಡಿದಳು.

ಸರಸ್ವತಿ ಪ್ರತ್ಯಕ್ಷಳಾಗಿ ಲೀಲೆಯನ್ನು ಸಾಂತ್ವನಪಡಿಸಿದಳು: ''ಮಗೂ, ಇದೇಕೆ ಹೀಗೆ ದುಃಖಿಸುತ್ತಿದ್ದೀಯೆ? ಮರೀಚಿಕೆಯಲ್ಲಿರುವ ನೀರಿನಂತೆ ಸಂಕಷ್ಟವೂ ಒಂದು ಭ್ರಮೆ ಮಾತ್ರವಮ್ಮ!'' ಆಗ ಲೀಲಾ ತನ್ನ ಪತಿ ಎಲ್ಲಿರುವನೆಂದು ಕೇಳಿದಳು. ಅದಕ್ಕೆ ಸರಸ್ವತಿ ಕೊಟ್ಟ ಉತ್ತರ ಹೀಗಿತ್ತು: ''ಓ ಲೀಲಾ, ಆಕಾಶವೆಂಬುದು (ಇಲ್ಲಿ ಆಕಾಶವೆಂದರೆ ನಮ್ಮ ಸುತ್ತಲೂ ಇರುವ ಅವಕಾಶವೆಂದು ತಿಳಿದು ಕೊಳ್ಳಬೇಕು) ಮೂರು ವಿಧ. ಒಂದು ಮಾನಸಿಕ ಆಕಾಶ; ಇನ್ನೊಂದು ಭೌತಿಕ ಆಕಾಶ; ಹಾಗೂ ಮೂರನೆಯದು ಅನಂತ ಚೈತನ್ಯಾಕಾಶ. ಉತ್ಕಟ ಧ್ಯಾನದಿಂದ ಒಬ್ಬನ ದೇಹವು ಚೈತನ್ಯಾಕಾಶವೆಂದು ತಿಳಿದುಕೊಳ್ಳಬಹುದು. ನಿನ್ನೆಲ್ಲ ಆಲೋಚನೆಗಳೂ ನಶಿಸಿಹೋದಾಗ, ಇಲ್ಲಿಯೇ, ಈ ಕ್ಷಣದಲ್ಲಿಯೇ, ನೀನು ಸರ್ವರಲ್ಲಿಯೂ ಐಕಾತ್ಮ್ಯ ಭಾವವನ್ನು ತಳೆಯಬಲ್ಲೆ. ಇದನ್ನು ನನ್ನ ಅನುಗ್ರಹದಿಂದ ನೀನೀಗ ಪಡೆದುಕೊಳ್ಳುತ್ತೀಯೆ.''

ನಂತರ ಲೀಲೆಯು ಧ್ಯಾನ ಮಾಡಲಾರಂಭಿಸಿದಳು. ಒಡನೆ ಅವಳು ಉನ್ನತ ಸ್ಥಿತಿಗೆ ಏರಿದಳು. ಚೈತನ್ಯಾಕಾಶದಲ್ಲಿ ಅವಳೀಗ ನೆಲೆ ನಿಂತಿದ್ದಳು. ಅಲ್ಲೊಬ್ಬ ರಾಜನನ್ನು ಅವಳು ಕಂಡಳು. ಸಿಂಹಾಸನದ ಮೇಲೆ ಕುಳಿತಿದ್ದ ಅವನ ಸುತ್ತಲೂ ಹಲವಾರು ಸಾಮಂತ ರಾಜರು ಮತ್ತು ಋಷಿಮುನಿಗಳು ನೆರೆದಿದ್ದರು. ಲೀಲೆ ಅವರನ್ನೆಲ್ಲ ಕಂಡಳೇ ಹೊರತು, ಅವರೆಲ್ಲ ಇವಳನ್ನು ಕಾಣಲಿಲ್ಲ. ಏಕೆಂದರೆ, ಒಬ್ಬ ವ್ಯಕ್ತಿಯ ಆಲೋಚನಾರೂಪಗಳು ಅವನಿಗೆ ಮಾತ್ರವೇ ನೋಡಲು ಅಥವಾ ಅನುಭವಿಸಲು ಸಾಧ್ಯ. ರಾಜನು ಒಬ್ಬ ಸುಂದರ ಯುವಕನಾಗಿದ್ದನು. ಇದಲ್ಲದೆ, ರಾಜ ಪದ್ಮನ ಆಸ್ಥಾನದ ಹಲವಾರು ಸಭಿಕರು ಅಲ್ಲಿಯೂ ಇದ್ದರು. ಲೀಲಾ ಆಶ್ಚರ್ಯಪಟ್ಟಳು, ಇವರು ಕೂಡ ಸತ್ತುಹೋಗಿದ್ದಾರೋ ಹೇಗೆ?

ಸರಸ್ವತಿಯ ಅನುಗ್ರಹದಿಂದ ಲೀಲೆ ಮತ್ತೆ ಯಥಾಸ್ಥಿತಿಗೆ ಮರಳಿ ಬಂದಳು. ತನ್ನ ಸೇವಕರು ನಿದ್ರಿಸುತ್ತಿರುವುದನ್ನು ಕಂಡಳು. ಅವರನ್ನು ಎಬ್ಬಿಸಿ, ರಾಜಸಭೆಯ ಸದಸ್ಯರನ್ನೆಲ್ಲ ಒಟ್ಟುಗೂಡಿಸುವಂತೆ ಆದೇಶವಿತ್ತಳು. ಅವರೆಲ್ಲರೂ ಧಾವಿಸಿಬಂದರು. ಆಶ್ಚರ್ಯವೆಂದರೆ ಅವಳು ತನ್ನ ದರ್ಶನದಲ್ಲಿ ಕಂಡಿದ್ದ ಮಂತ್ರಿಗಳು, ಋಷಿಮುನಿಗಳು, ಅಧಿಕಾರಿಗಳು, ಸಂಬಂಧಿಕರು ಮತ್ತು ಸ್ನೇಹಿತರು ಇಲ್ಲೂ ಇದ್ದರು. ಇದನ್ನು ನೋಡಿ ಲೀಲಾ ಅಚ್ಚರಿಹೊಂದಿದಳು. 'ಒಬ್ಬರೇ ಜನರು ಎರಡು ಕಡೆಗಳಲ್ಲಿ ಇರಲು ಹೇಗೆ ಸಾಧ್ಯ?' ಎಂದುಕೊಂಡಳು. ಮತ್ತೆ ಸರಸ್ವತಿಯನ್ನು ಪ್ರಾರ್ಥಿಸಿ, ಅವಳು ಕಾಣಿಸಿಕೊಂಡಾಗ ತನ್ನ ಸಂದೇಹವನ್ನು ತೋಡಿಕೊಂಡಳು. ತನಗೆ ಉಂಟಾದ ಎರಡು ಬಗೆಯ ಅನುಭವಗಳಲ್ಲಿ ಯಾವುದು ಸತ್ಯ, ಯಾವುದು ಭ್ರಮೆ ಎಂದು ತಿಳಿಸಬೇಕಾಗಿ ಕೇಳಿಕೊಂಡಳು.

**ಸರಸ್ವತಿ:** ಲೀಲಾ, ನೀನೇ ಹೇಳು. ನಿನಗೆ ಯಾವುದು ನಿಜ ಎಂದು ತೋರುತ್ತದೆ? ಯಾವುದು ಸುಳ್ಳು ಎಂದು ತೋರುತ್ತದೆ?

**ಲೀಲಾ:** ನಾನಿಲ್ಲಿದ್ದೇನೆ; ನೀನು ನನ್ನ ಮುಂದೆ ನಿಂತಿದ್ದೀಯೆ. ಇದನ್ನೇ ನಾನು ನಿಜ ಎಂದು ಅಂದುಕೊಂಡಿದ್ದೇನೆ. ನನ್ನ ಗಂಡನು ಇರುವ ಲೋಕವಿದೆಯಲ್ಲ, ಅದು ಮಿಥ್ಯೆಯೇ ಸರಿ.

**ಸರಸ್ವತಿ:** ಲೀಲಾ, ಇಡೀ ಸೃಷ್ಟಿಗೆ ಕಾರಣ ಯಾವುದು ಗೊತ್ತೆ? ಸ್ಮರಣೆ ಅಥವಾ ನೆನಪು. ಯಾವುದರ ನೆನಪು? ಹಿಂದಿನ ಸೃಷ್ಟಿಯ ನೆನಪು. ಆ ಹಿಂದಿನ ಸೃಷ್ಟಿ ಯಾವುದು? ಅದೇ ನೆನಪೇ. ಸ್ಮರಣೆ ಎಂದರೆ ಏನು? ಬರೀ ಶೂನ್ಯ. ಹೀಗಾಗಿ ಅದರಿಂದ ಹೊರಹೊಮ್ಮಿದ ಈ ಜಗತ್ತೂ ಶೂನ್ಯವೇ. ಆದ್ದರಿಂದ ನಿನ್ನ ಗಂಡನ ಹುಟ್ಟು ಕೂಡ ಒಂದು ಭ್ರಮೆಯೇ ಸರಿ. ಏಕೆಂದರೆ ಇಡೀ ಜಗತ್ತು ನಮ್ಮ ಮನಸ್ಸಿನ ಸ್ಮರಣೆ ಮಾತ್ರ; ನಮ್ಮ ಕಲ್ಪನೆಯ ವಿಲಾಸ ಮಾತ್ರ. ಇದೊಂದು ಸ್ವಪ್ನ ಸದೃಶವಾದ ಅಸ್ತಿತ್ವ. ಇದರಲ್ಲಿ ಯಾವುದೇ ರೀತಿಯ ಸತ್ವವೂ ಇಲ್ಲ. ಇದನ್ನು ಬಿಂಬಿಸುವ ಒಂದು ಕಥೆ ಹೇಳುತ್ತೇನೆ, ಕೇಳು.

ಸರಸ್ವತಿ ಕಥೆ ಹೇಳಲು ಆರಂಭಿಸಿದಳು. *(ಮುಂದಿನ ಸಂಚಿಕೆಗೆ)*


## ಆಧ್ಯಾತ್ಮಿಕ ಶಿಬಿರ (ಪುರುಷರಿಗಾಗಿ ಆವಾಸಿ ಕ್ಯಾಂಪ್)

**2015 ಜುಲೈ 2 ರಿಂದ 6 ರವರೆಗೆ ;** *ಮಾಧ್ಯಮ:* **ಕನ್ನಡ ಮತ್ತು ಇಂಗ್ಲಿಷ್**

**ಊಟ ಹಾಗೂ ವಿಶೇಷ ವಸತಿ ಸೌಲಭ್ಯಗಳಿರುವ ಐದು ದಿನಗಳ ಶಿಬಿರಕ್ಕಾಗಿ: ರೂ. 2,400/- ಮಾತ್ರ**

***ಶಿಬಿರದ ಎಲ್ಲ ಐದು ದಿನಗಳು ಕಾರ್ಯಕ್ರಮಗಳಲ್ಲಿ ಪೂರ್ಣವಾಗಿ ಭಾಗವಹಿಸುವವರು ಮಾತ್ರ ಅರ್ಜಿಫಾರಂ ಭರ್ತಿ ಮಾಡಬೇಕು. *150 ಶಿಬಿರಾರ್ಥಿಗಳು ಮಾತ್ರ ಭಾಗವಹಿಸಲು ಅವಕಾಶವಿರುವುದರಿಂದ ಮೊದಲು ಸ್ವೀಕರಿಸಿದ ಅರ್ಜಿಗಳಿಗೆ ಆದ್ಯತೆ ಇರುತ್ತದೆ. *ಒಂದು ವೇಳೆ ಆಯ್ಕೆಗೊಂಡ ಶಿಬಿರಾರ್ಥಿಗಳು ಬರದೆ ಇದ್ದಲ್ಲಿ ಅವರ ಪ್ರತಿನಿಧಿಯಾಗಿ ಬೇರೆ ಯಾರಿಗೂ ಅವಕಾಶವಿರುವುದಿಲ್ಲ. *ಒಂದು ವೇಳೆ ಶಿಬಿರಾರ್ಥಿಗಳು ಶಿಬಿರಕ್ಕೆ ಬರದೆ ಇದ್ದಲ್ಲಿ ರೂ.2000/- ಅನ್ನು ಮಾತ್ರ ಹಿಂತಿರುಗಿಸಲಾಗುವುದು. *ಶಿಬಿರದ ವಿವರಗಳನ್ನೊಳಗೊಂಡ ಪ್ರಾಸ್ಪೆಕ್ಟಸ್ ಮತ್ತು ಅರ್ಜಿಫಾರಂಗಾಗಿ ನಿಮ್ಮ ವಿಳಾಸವಿರುವ (10cmx23cm) ಲಕೋಟೆಗೆ ರೂ.5/- ಅಂಚೆ ಸ್ಟ್ಯಾಂಪ್ ಲಗತ್ತಿಸಿ ಕರೆಸ್ಪಾಂಡೆಂಟರ ಹೆಸರಿಗೆ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ. *ಅರ್ಜಿಫಾರಂಗಳನ್ನು www.rimse.org.in ವೆಬ್‌ಸೈಟಿನಿಂದಲೂ ಡೌನ್‌ಲೋಡ್ ಮಾಡಿ, ಭರ್ತಿಮಾಡಿ, ಸ್ಕ್ಯಾನ್ ಮಾಡಿ ಕಳುಹಿಸಬಹುದು. *ತುಂಬಿದ ಅರ್ಜಿಫಾರಂಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ : ಜೂನ್ 10, 2015.**

ವಿಳಾಸ: **Ramakrishna Institute of Moral and Spiritual Education, Yadavagiri, Mysore-570020**
**Phone:0821-2417666 ; E-mail: mysore.rimse@gmail.com; Website: www.rimse.org.in**